# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 194 | Pages. 2 | Date: 12-07-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 194 – ಪುಟಗಳು : 2 | 12-07-2026 ಭಾನುವಾರ | Ph: 8762954248 | ದರ : ₹1


# ಮುಸುಕಿನ ಜೋಳ ನುಂಗಿ ಹಾಕಿದ ಬಿಳಿಸುಳಿ ರೋಗ

## ಸಂಕಷ್ಟದಲ್ಲಿ ಅನ್ನದಾತ | ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮುಂಗಾರು ಬೆಳೆಯಾದ ಮುಸುಕಿನ ಜೋಳ ಬಿಳಿಸುಳಿ ರೋಗದಿಂದ ಸಂಪೂರ್ಣ ಹಾನಿಗೀಡಾಗಿದ್ದು ಅನ್ನದಾತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ರೋಗ ತಗುಲಿ ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಸಮೀಕ್ಷೆ ನಡೆಸಿ ಬೆಳೆ ಹಾನಿಗೆ ಪರಿಹಾರ ಘೋಷಿಸಬೇಕು ಹಾಗೂ ರೈತರ ಸಾಲಮನ್ನಾ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.

ತಾಲೂಕಿನ ಬೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಬ ಮತ್ತು ಧರ್ಮಪುರಿ ಗ್ರಾಮದಲ್ಲಿ ಹಾನಿಗೊಳಗಾದ ಹೊಲಗಳಿಗೆ ಶನಿವಾರ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದರು.

ಕಳೆದ ವರ್ಷವೂ ಇದೇ ರೀತಿಯ ರೋಗ ಕಾಣಿಸಿಕೊಂಡಾಗ ಸ್ಥಳ ಪರಿಶೀಲನೆ ನಡೆಸಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದೆ. ವಿಧಾನ ಸಭೆಯಲ್ಲಿಯೂ ಈ ವಿಷಯ ಪ್ರಸ್ತಾಪಿಸಿದ್ದರೂ ರೈತರಿಗೆ ಸಮರ್ಪಕ ಪರಿಹಾರ ದೊರೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆಲೂರು ಹಾಗೂ ಕಟ್ಟಾಯ ಭಾಗದ ಬಹುತೇಕ ರೈತರು 2-5 ಎಕರೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರು. ಅವರಿಗೆ ಮೆಕ್ಕೆಜೋಳವೇ ಪ್ರಮುಖ ವಾಣಿಜ್ಯ ಬೆಳೆ. ಒಂದು ಎಕರೆ ಬೆಳೆಗೆ ಸುಮಾರು 30 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡುತ್ತಾರೆ. ಔಷಧಿ ಸಿಂಪಡಣೆ, ಗೊಬ್ಬರ, ಕಳೆ ನಿಯಂತ್ರಣ ಸೇರಿ ಎಲ್ಲಾ ಕೆಲಸಗಳ ನಂತರ ಉತ್ತಮ ಇಳುವರಿ ಬಂದರೆ ಮಾತ್ರ 25-30 ಸಾವಿರ ರೂ. ವರೆಗೆ ಆದಾಯದ ನಿರೀಕ್ಷೆ ಇರುತ್ತದೆ.

ಆದರೆ ಈ ಬಾರಿ ಬಿಳಿ ಸುಳಿ ರೋಗದಿಂದ ಸಂಪೂರ್ಣ ಬೆಳೆ ಹಾಳಾಗಿದ್ದು, ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ



ಸಿಲುಕಿದ್ದಾರೆ ಎಂದು ಹೇಳಿದರು.

ಬಿಳಿ ಸುಳಿ ರೋಗದಿಂದ ಗಿಡಗಳು ದುರ್ಬಲಗೊಂಡು ಫಸಲು ಬರದ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ಸಂದರ್ಭದಲ್ಲಿ ಕೃಷಿ ಇಲಾಖೆ ರೈತರಿಗೆ ಸೂಕ್ತ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಿತ್ತು ಎಂದು ಹೇಳಿದರು.

ಕಟಾವು ಬೇಡ: ಬೆಳೆ ಹಾನಿಗೊಳಗಾದ ರೈತರು ಸರ್ಕಾರದ ಸಮೀಕ್ಷೆ ಪೂರ್ಣ ಗೊಳ್ಳುವವರೆಗೆ ಯಾವುದೇ ಕಾರಣಕ್ಕೂ ಬೆಳೆ ಕಟಾವು ಅಥವಾ ಹೊಲವನ್ನು ಟ್ರ್ಯಾಕ್ಟರ್ ಮೂಲಕ ಉಳುಮೆ ಮಾಡಬಾರದು ಎಂದು ಶಾಸಕರು ಮನವಿ ಮಾಡಿದರು. ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಹಾಗೂ ವಿವಿಧ ಕಾರಣ ಗಳಿಂದ ಬೆಳೆ ನಷ್ಟ ಸಂಭವಿಸುವ ಸಂದರ್ಭಗಳಲ್ಲಿ ರೈತರಿಗೆ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ವಿಮಾ ಯೋಜನೆ ಬಳಸಿಕೊಳ್ಳಿ ಎಂದು ಸಲಹೆ ನೀಡಿದರು. ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಬ್ಯಾಂಕ್ ಸಿಬ್ಬಂದಿ ಯೋಜನೆ ಕುರಿತು ರೈತರಿಗೆ ಸಮರ್ಪಕ ಮಾಹಿತಿ ನೀಡಬೇಕು. ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸಿ ಯಾವುದೇ ಅರ್ಹ ರೈತ ಯೋಜನೆಯಿಂದ ವಂಚಿತರಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ರೈತರು ಸಮೀಪದ ರೈತ ಸಂಪರ್ಕ ಕೇಂದ್ರ, ಕೃಷಿ ಇಲಾಖೆ ಕಚೇರಿ ಅಥವಾ ಸಂಬಂಧಿತ ಬ್ಯಾಂಕ್‌ಗಳನ್ನು ಸಂಪರ್ಕಿಸಿ ಅಗತ್ಯ ದಾಖಲೆಗಳೊಂದಿಗೆ ಫಸಲ್ ಭೀಮಾ ಯೋಜನೆಗೆ ನೋಂದಾಯಿಸಿಕೊಂಡು ಯೋಜನೆಯ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳುವಂತೆ ಶಾಸಕ ಸಿಮೆಂಟ್ ಮಂಜು ಕರೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಜಮೀನಿನಲ್ಲೇ ನಿಂತು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ರೈತರ ನೆರವಿಗೆ ಬರುವಂತೆ ಕೋರಿದರು. ಸಕಲೇಶಪುರ ವಿಭಾಗದ ಕೃಷಿ ಇಲಾಖೆ ಉಪ ನಿರ್ದೇಶಕ ಪ್ರಭಾಕರ್, ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮನು ಕುಮಾರ್ ಮೊದಲಾದವರಿದ್ದರು.

## ಶೇ. 59ರಷ್ಟು ಜೋಳ ಬಿತ್ತನೆ

ಜಿಲ್ಲೆಯಲ್ಲಿ ಈ ಹಂಗಾಮಿನಲ್ಲಿ 1,13,719 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ, ಮಳೆ ಕೊರತೆಯಿಂದ ಕೇವಲ 67,792 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ನಡೆದಿದ್ದು, ಇದು ಗುರಿಯ ಶೇ.59ರಷ್ಟೇ ಆಗಿದೆ.

ಬಿತ್ತನೆಯಾದ ಪ್ರದೇಶಗಳಲ್ಲೂ ಮಳೆ ಕೊರತೆ ಹಾಗೂ ಬಿಳಿಸುಳಿ ರೋಗದ ದ್ವಂದ್ವ ಹೊಡೆತದಿಂದ ಬೆಳೆಯ ಬೆಳವಣಿಗೆ ಕುಂಠಿತಗೊಂಡಿದೆ.

ಔಷಧಿ ಸಿಂಪಡಿಸಿದರೂ ರೋಗ ನಿಯಂತ್ರಣಕ್ಕೆ ಬರುತ್ತಿಲ್ಲ. ರೈತರು, ಕೃಷಿ ಇಲಾಖೆಯಿಂದ ವಿತರಿಸಲಾದ ಬಿತ್ತನೆ ಬೀಜಗಳ ಗುಣಮಟ್ಟದ ಬಗ್ಗೆ ಪ್ರಶ್ನೆ ಎತ್ತುತ್ತಿದ್ದಾರೆ. ಇಲಾಖೆಯು ಬೀಜೋಪಚಾರ ಮಾಡಿದ ಹಾಗೂ ಪರೀಕ್ಷಿಸಿ ದೃಢೀಕರಿಸಿದ ಬೀಜಗಳನ್ನು ವಿತರಿಸಿದ್ದರೂ, ಅವುಗಳಿಂದ ಬೆಳೆದ ಬೆಳೆಯಲ್ಲಿಯೇ ವ್ಯಾಪಕವಾಗಿ ರೋಗ ಕಾಣಿಸಿಕೊಂಡಿರುವುದು ಅನುಮಾನಗಳಿಗೆ ಕಾರಣವಾಗಿದೆ.

ರಾಸಾಯನಿಕ ಗೊಬ್ಬರ ಹಾಗೂ ಗು ಕೀಟನಾಶಕಗಳ ಅತಿಯಾದ ಬಳಕೆ ಮಣ್ಣಿನ ಆರೋಗ್ಯದ ಮೇಲೂ ಪರಿಣಾಮ ಬೀರಿದ್ದು, ಒಂದು ಅಥವಾ ಎರಡು ವರ್ಷಗಳ ಕಾಲ ಪರ್ಯಾಯ ಬೆಳೆಗಳನ್ನು ಬೆಳೆಯುವುದು ಸೂಕ್ತ ಎಂಬ ಸಲಹೆಯನ್ನೂ ನೀಡುತ್ತಿದ್ದಾರೆ.



## ಯುವತಿ ವಿಚಾರಕ್ಕೆ ಯುವಕರ ಗಲಾಟೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಯುವತಿಯೊಬ್ಬಳನ್ನು ಪ್ರೀತಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರು ಯುವಕರು ಪರಸ್ಪರ ಜಗಳ ಆಡಿಕೊಂಡು ಒಬ್ಬ ಮತ್ತೊಬ್ಬನಿಗೆ ಚಾಕುವಿನಿಂದ ಇರಿದಿರುವ ಘಟನೆ ನಡೆದಿದೆ.

ಗಾಯಗೊಂಡ ಯುವಕನನ್ನು ಶರತ್ (21) ಎಂದು ಗುರುತಿಸಲಾಗಿದ್ದು, ಹಲ್ಲೆ ನಡೆಸಿದ ಆರೋಪದ ಮೇಲೆ ಪ್ರಜ್ವಲ್ (22) ಎಂಬ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಶರತ್ ಸ್ಥಳೀಯ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ಶರತ್ ಹಾಗೂ ಪ್ರಜ್ವಲ್ ಇಬ್ಬರೂ ಒಬ್ಬಳೇ ಯುವತಿಯನ್ನು ಪ್ರೀತಿಸುತ್ತಿದ್ದರು. ಇದೇ ಕಾರಣಕ್ಕೆ ಕಳೆದ ಕೆಲವು ದಿನಗಳಿಂದ ಆಗಾಗ ಮಾತಿನ ಚಕಮಕಿ ಹಾಗೂ ಸಣ್ಣಪುಟ್ಟ ಜಗಳ ನಡೆಯುತ್ತಿತ್ತು.

ಶನಿವಾರ ಬೆಳಿಗ್ಗೆ ಸುಮಾರು 10 ಗಂಟೆ ವೇಳೆಗೆ ಶರತ್, ಪ್ರಜ್ವಲ್‌ನನ್ನು ಮಾತನಾಡಿಸಲು ಬಂದಿದ್ದಾನೆ. ಈ ವೇಳೆ ಇಬ್ಬರ ನಡುವೆ ಮತ್ತೆ ವಾಗ್ವಾದ ಉಂಟಾಗಿ ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ.

ಕೋಪಗೊಂಡ ಪ್ರಜ್ವಲ್ ತನ್ನ ಬಳಿಯಿದ್ದ ಚಾಕುವಿನಿಂದ ಶರತ್‌ನ ಕುತ್ತಿಗೆ ಹಾಗೂ ಕೆನ್ನೆಯ ಭಾಗಕ್ಕೆ ಇರಿದಿದ್ದಾನೆ. ಪರಿಣಾಮ ಶರತ್ ಗಂಭೀರವಾಗಿ ಗಾಯಗೊಂಡಿದ್ದಾನೆ.

ಇದನ್ನು ಕಂಡ ಸಾರ್ವಜನಿಕರು ಆರೋಪಿಯನ್ನು ಹಿಡಿಯಲು ಯತ್ನಿಸಿದ್ದಾರೆ. ಇದೇ ವೇಳೆ ಆ ಮಾರ್ಗವಾಗಿ ತೆರಳುತ್ತಿದ್ದ ಪಿಎಸ್ಐ ಎಸ್.ಜಿ. ಪಾಟೀಲ್ ಹಾಗೂ ದಫೇದಾರ್ ದೇವರಾಜು ಅವರು ಕೂಡಲೇ ಸ್ಥಳಕ್ಕೆ ಧಾವಿಸಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಪ್ರಜ್ವಲ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಶಾಶ್ವತ ನಿವಾಸ ಪತ್ರ, ಅಧಿಸೂಚನೆ ಸಂವಿಧಾನ ಬಾಹಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರವು ಶಾಶ್ವತ ನಿವಾಸ ಪ್ರಮಾಣ ಪತ್ರ (ಪಿಆರ್‌ಸಿ)-2026 ಸಂಬಂಧ ಹೊರಡಿಸಿರುವ ಅಧಿಸೂಚನೆ ಸಂವಿಧಾನ ವಿರೋಧಿಯಾಗಿದ್ದು, ಕೂಡಲೇ ಸ್ಥಗಿತಗೊಳಿಸಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಈ ಅಧಿಸೂಚನೆ ಗಂಭೀರ ಅಸಾಂವಿಧಾನಿಕ, ಕಾನೂನು ಮತ್ತು ರಾಷ್ಟ್ರೀಯ ಭದ್ರತಾ ಆತಂಕ ಹುಟ್ಟು ಹಾಕಿದೆ. ಇದು ಎಸ್‌ಐಆರ್ ತಪ್ಪಿಸುವ ಕೆಲಸ

ಎಂದು ದೂರಿದರು.

ಇದರ ವಿರುದ್ಧ ಕೂಡಲೇ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಬೇಕು. ರಾಜ್ಯದ ದಿಕ್ಕು ತಪ್ಪಿಸುವ ಕೆಲಸಕ್ಕೆ ಕಡಿವಾಣ ಹಾಕಬೇಕು. ಭಾರತ ಸಂವಿಧಾನವು ದೇಶಾದ್ಯಂತ ಎಲ್ಲ ನಾಗರಿಕರಿಗೆ ಒಂದೇ ಪೌರತ್ವ





ಕಲ್ಪಿಸುತ್ತದೆ. ಆದರೆ ಕರ್ನಾಟಕ ಸರ್ಕಾರವು ಶಾಶ್ವತ ನಿವಾಸ ಪ್ರಮಾಣ ಪತ್ರವನ್ನು ನೀಡುವುದು ಸಾಂವಿಧಾನಿಕ ಚೌಕಟ್ಟಿಗೆ ವಿರುದ್ಧವಾಗಿದೆ ಎಂದರು.

ಭಾರತ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಅಕ್ರಮವಾಸಿಗಳು ಹೊರ ಹೋಗಿ, ನಿಜವಾದ ದೇಶವಾಸಿಗಳು ಇಲ್ಲಿ ಉಳಿಯಬೇಕು ಎಂಬ ಉದ್ದೇಶದಿಂದ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಆದರೆ ರಾಜ್ಯ ಸರ್ಕಾರ ಇದನ್ನು ದಾರಿ ತಪ್ಪಿಸಲು ರಾಜ್ಯ ಸರ್ಕಾರ ಈ ಹಾದಿ ತುಳಿದಿದೆ ಎಂದು ಆರೋಪಿಸಿದರು.

ಈ ನಡೆ ಸಂವಿಧಾನದ 14ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಯಾವುದೇ ಸಾಂವಿಧಾನಿಕ ಅಥವಾ ಶಾಸನ ಬದ್ಧ ಅಧಿಕಾರವಿಲ್ಲದೆ ಶಾಶ್ವತ ನಿವಾಸಿಗಳು ಎಂಬ ಪ್ರತ್ಯೇಕ ವರ್ಗವನ್ನು ರಚಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಇದು ಯಾವುದೇ ಕಾನೂನುಬದ್ಧ ಸಾಂವಿಧಾನಿಕ ಉದ್ದೇಶದೊಂದಿಗೆ ತರ್ಕಬದ್ಧ ಸಂಬಂಧವನ್ನು ಹೊಂದಿಲ್ಲ. ರಾಷ್ಟ್ರೀಯ ಭದ್ರತೆಯ ದೃಷ್ಟಿಕೋನದಿಂದ ಅಧಿಸೂಚನೆಯು ಅತ್ಯಂತ ಆತಂಕಕಾರಿ ಎಂದರು.

ರಾಜ್ಯ ಸರ್ಕಾರ ಈ ಮಾರ್ಗದ ಮೂಲಕ ಅಕ್ರಮ ನಿವಾಸಿಗಳನ್ನು ಕಾನೂನುಬದ್ಧಗೊಳಿಸಬಹುದು, ಅಕ್ರಮ ವಲಸಿಗರನ್ನು ಗುರುತಿಸಲು ಮತ್ತು ತೆಗೆದು ಹಾಕಲು ಕೇಂದ್ರ ಸರ್ಕಾರದ ಪ್ರಯತ್ನಗಳನ್ನು ನಿರಾಶೆಗೊಳಿಸುತ್ತದೆ ಎಂದರು.

ಶಾಶ್ವತ ನಿವಾಸ ಪ್ರಮಾಣ ಪತ್ರವು ರಾಷ್ಟ್ರೀಯ ಭದ್ರತೆ ಮತ್ತು ಸಾಮಾಜಿಕ ಸುವ್ಯವಸ್ಥೆಗೆ ಗಂಭೀರ ಅಪಾಯವನ್ನು ಮತ್ತು ಬೆದರಿಕೆಗೆ ಕಾರಣ ಆಗಲಿದೆ. ಕರ್ನಾಟಕ ಶಾಶ್ವತ ನಿವಾಸ ಪ್ರಮಾಣ ಪತ್ರ ಸಾಂವಿಧಾನಿಕ ಸಿಂಧುತ್ವ ಪರಿಶೀಲಿಸಲು ಕೇಂದ್ರ ಗೃಹ ಸಚಿವಾಲಯ ಸಮರ್ಥ ಅಧಿಕಾರಿ ನೇಮಿಸಬೇಕು ಎಂದು ಒತ್ತಾಯಿಸಿದರು.

ಅಂಥ ಪರಿಶೀಲನೆ ಆಗುವವರೆಗೆ ಅಧಿಸೂಚನೆ ಅನುಷ್ಠಾನವನ್ನು ಸ್ಥಗಿತಗೊಳಿಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ರಾಜ್‌ಕುಮಾರ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರು, ರಾಜ್ಯ ಸಂಚಾಲಕ ಪ್ರಕಾಶ್, ಮಾಧ್ಯಮ ಪ್ರಮುಖ್ ವೇದಾವತಿ ಇದ್ದರು.

## ಚ.ರಾ.ಪಟ್ಟಣದಲ್ಲಿ ಲೋಕ ಅದಾಲತ್ ಯಶಸ್ವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 497 ವಿವಿಧ ಬಗೆಯ ಪ್ರಕರಣ ಇತ್ಯರ್ಥಪಡಿಸಲಾಗಿದೆ ಎಂದು 4ನೇ ಜಿಲ್ಲಾ ಸತ್ರ ನ್ಯಾಯಾಧೀಶರಾದ ಕಲ್ಪನಾ ತಿಳಿಸಿದರು.

ವಿವಾಹ ವಿಚ್ಛೇದನಕ್ಕೆ ಮುಂದಾಗಿದ್ದ ಸ್ಪಂದನ ಹಾಗೂ ಮಧು ಎಂಬ ದಂಪತಿ ಅದಾಲತ್ ಮೂಲಕ ರಾಜಿ ಸಂಧಾನಕ್ಕೆ ಮುಂದಾಗಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಒಟ್ಟಾಗಿ ಜೀವನ ನಡೆಸಬೇಕು ಎಂದರು.

ಕಂದಾಯ ಇಲಾಖೆ ಬ್ಯಾಂಕ್ ಅಧಿಕಾರಿಗಳು ಸೇರಿ ಹಲವಾರು ಇಲಾಖೆಗಳ ಅಧಿಕಾರಿಗಳು, ಕಕ್ಷಿದಾರರು, ವಕೀಲರು ಅದಾಲತ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಮುಂದಿನ ಕಾರ್ಯಕ್ರಮಗಳಲ್ಲಿ ಮತ್ತಷ್ಟು ಪ್ರಕರಣಗಳು ಇತ್ಯರ್ಥ ಗೊಳ್ಳುವ ಭರವಸೆ ಇದೆ ಎಂದರು.

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕುಸುಮ, ಎ.ಅರುಣ ಕುಮಾರಿ ಇತರರಿದ್ದರು.

## ಹಿಂಬಾಗಿಲಿಂದ ಬಂದು ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಜೆ.ಸುರಪುರ ಗ್ರಾಮದ ಮನೆಯೊಂದರಲ್ಲಿ 215 ಗ್ರಾಂ ತೂಕದ ಚಿನ್ನಾಭರಣ ಹಾಗೂ 50 ಸಾವಿರ ರೂ. ನಗದು ಕಳವು ಮಾಡಲಾಗಿದೆ.

ಗ್ರಾಮದ ಸಿದ್ದೇಶ್ ಅವರ ಮನೆಯಲ್ಲಿ ಕಳುವಾಗಿದೆ. ಜು. 10ರಂದು ಸಮಾರಂಭ ನಿಮಿತ್ತ ಮಲ್ಲೇನಹಳ್ಳಿಗೆ ತೆರಳುವಾಗ ಪತ್ನಿ ಸೌಮ್ಯ ಬೀರುವಿನಲ್ಲಿದ್ದ ಆಭರಣ ಪರಿಶೀಲಿಸಿದಾಗ ಕಳುವಾಗಿರುವುದು ತಿಳಿದಿದೆ. 15 ದಿನಗಳ ಹಿಂದೆ ಇಟ್ಟಿದ್ದ ಚಿನ್ನಾಭರಣ ಇಲ್ಲವಾಗಿದೆ. ಹಿಂಬಾಗಿಲಿನಿಂದ ಬಂದಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ ಚಿನ್ನದ ಬ್ರಾಸ್ ಲೈ ಟ್ (25 ಗ್ರಾಂ), ಬ್ರಾಸ್ ಲೈಟ್ (30 ಗ್ರಾಂ), ಚಿನ್ನದ ಕೊರಳ ಚೈನ್ (35 ಗ್ರಾಂ), ಚಿನ್ನದ ಕೊರಳ ಚೈನ್ (40 ಗ್ರಾಂ), ಚಿನ್ನದ ಕೊರಳ ಚೈನ್ (20 ಗ್ರಾಂ), ಚಿನ್ನದ ಡಾಲರ್ (4 ಗ್ರಾಂ), ಚಿನ್ನದ ಡಾಲರ್ (3 ಗ್ರಾಂ), ಚಿನ್ನದ ಕಪಾಲಿ ಉಂಗುರ (4 ಗ್ರಾಂ), ಚಿನ್ನದ ಎರಡು ಎಳೆ ಚೈನ್ (30 ಗ್ರಾಂ), ಚಿನ್ನದ ಉಂಗುರ (10 ಗ್ರಾಂ) ಹಾಗೂ ಪರ್ಸ್‌ನಲ್ಲಿದ್ದ 50 ಸಾವಿರ ರೂ. ನಾಪತ್ತೆಯಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗ್ರಾಮೀಣ ಭಾಗಕ್ಕೆ ಮೂಲ ಸೌಕರ್ಯ ಕಲ್ಪಿಸಲು ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಲು ರಾಜ್ಯ ಸರ್ಕಾರ ತಾಲ್ಲೂಕಿಗೆ 8 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಗ್ರಾಮೀಣ ಪ್ರದೇಶಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ತಾಲ್ಲೂಕಿನ ಸಿ.ಹೊನ್ನೇನಹಳ್ಳಿ ಶ್ರೀ ಲಕ್ಷ್ಮೀ ದೇವಾಲಯದ ಮುಂಭಾಗ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹಲವು ವರ್ಷಗಳಿಂದ ಗ್ರಾಮಸ್ಥರು ನಿರಂತರ ವಿದ್ಯುತ್ ಜ್ಯೋತಿ ಸಂಪರ್ಕಕ್ಕೆ ಒತ್ತಾಯಿಸುತ್ತಿದ್ದರು. 50 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಬಡಾವಣೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಸುಮಾರು 100ಕ್ಕೂ ಹೆಚ್ಚು ವಿದ್ಯುತ್



ಕಂಬಗಳ ಅಳವಡಿಕೆ ಮಾಡಬೇಕಾಗಿದೆ. ಸದ್ಯದಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ. 30 ದಿನದೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಭರವಸೆ ನೀಡಿದರು.

ನಿರಂತರ ವಿದ್ಯುತ್ ಸಂಪರ್ಕದಿಂದ ಗ್ರಾಮಸ್ಥರಿಗೆ 24★7 ವಿದ್ಯುತ್ ದೊರೆಯಲಿದೆ. ಗ್ರಾಮದಲ್ಲಿ ಈಗಾಗಲೇ ಬಾಗೂರು-ಕೆಂಬಾಳು ಮುಖ್ಯ ರಸ್ತೆಯಿಂದ ಗ್ರಾಮದ ವರೆಗೆ ಮೂಲ ಶ್ರೀ ಲಕ್ಷ್ಮೀ ದೇವಾಲಯದ ವರೆಗೆ ಹಾಗು ವಿವಿಧ ಬಡಾವಣೆಗಳ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಮಾದಗೊಂಡನಹಳ್ಳಿ ಗ್ರಾಮದಿಂದ ಶ್ರೀ ಹೊನ್ನೇನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಸದ್ಯ ಸರ್ಕಾರದಿಂದ ತಾಲ್ಲೂಕಿಗೆ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬರುತ್ತಿಲ್ಲ. ಮುಂಬರುವ ದಿನಗಳಲ್ಲಿ ಗಮನ ಹರಿಸಲಾಗುತ್ತದೆ. ಜೊತೆಗೆ ಗ್ರಾಮದಲ್ಲಿ ಭೋವಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿದ್ದು ಭೋವಿ ನಿಗಮ ಸೇರಿ ವಿವಿಧ ಇಲಾಖೆಗಳಿಂದ ಬರುವ ಕೊಳವೆ ಬಾವಿ ಆಶ್ರಯ ಮನೆ ಸೇರಿ ವಿವಿಧ ಸೌಲಭ್ಯಗಳನ್ನು ಗ್ರಾಮದ ಫಲಾನುಭವಿಗಳಿಗೆ ಕೊಡಲಾಗಿದೆ ಎಂದರು.

ಲಕ್ಷ್ಮೀದೇವಿ ದೇವಾಲಯ ಆವರಣದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಚಿಂತನೆ ನಡೆಸಿದ್ದು ಅನುದಾನ ಲಭ್ಯತೆ ಆಧಾರದ ಮೇಲೆ ಯೋಜನೆ ರೂಪಿಸಲಾಗುತ್ತದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಸ್ ವ್ಯವಸ್ಥೆ ಕಲ್ಪಿಸುವ ಕುರಿತು ಅಧಿಕಾರಿಗಳೊಂದಿಗೆ ಮಾತನಾಡುವುದಾಗಿ ಹೇಳಿದರು.

ಶಿಕ್ಷಕ ರಂಗಸ್ವಾಮಿ ಮಾತನಾಡಿ, ರಸ್ತೆ, ದೇವಾಲಯ ನಿರ್ಮಾಣ, ನಿರಂತರ ವಿದ್ಯುತ್ ಸಂಪರ್ಕ ಸೇರಿ ಅನೇಕ ಅಭಿವೃದ್ಧಿ ಕೆಲಸಗಳಿಗೆ ಶಾಸಕರು ಕಳೆದ 3 ಅವಧಿಗಳಲ್ಲೂ ಅನುದಾನ ನೀಡಿದ್ದಾರೆ.


ಗ್ರಾಮದಿಂದ ಮಾದಗೊಂಡನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಪಡಿಸುವಂತೆ ಒತ್ತಾಯಿಸಿದರು.

ಬಾಗೂರು ಸೆಸ್ಕಾಂ ಜೆಇ ಮೋಹನ್, ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್. ಮಂಜುನಾಥ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬೂದೇಶ್, ಶ್ರೀ ಲಕ್ಷ್ಮೀದೇವಿ ದೇವಾಲಯ ಸಮಿತಿ ಅಧ್ಯಕ್ಷ ರಾಜಣ್ಣ, ಕಾರ್ಯದರ್ಶಿ ಸ್ವಾಮಿ, ಖಜಾಂಚಿ ಮಂಜುನಾಥ್, ಮುಖಂಡರಾದ ವೆಂಕಟರಾಮು, ಹುಲಿಕೆರೆ ಸಂಪತ್ ಕುಮಾರ್, ರಂಗೇಗೌಡ, ನಿಮಿಷಾಂಬ ಎಲೆಕ್ಟ್ರಿಕಲ್ಸ್ ಜಯರಾಮ್, ಅರ್ಚಕ ವೆಂಕಟೇಶ್ ಹಾಜರಿದ್ದರು.

# ಶೇ. 97.16 ರಷ್ಟು ಎನ್ಯೂಮರೇಷನ್ ನಮೂನೆ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಜಿಲ್ಲೆಯಲ್ಲಿ ನಡೆಸುತ್ತಿದ್ದು, ಈಗಾಗಲೇ ಎನ್ಯೂಮರೇಷನ್ ನಮೂನೆಗಳನ್ನು ಶೇ. 97.16 ರಷ್ಟು ವಿತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.




ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿರುವ ಬಗ್ಗೆ ನಡೆದ ಸಭೆಯಲ್ಲಿ ಮಾತನಾಡಿ, ಮತಗಟ್ಟೆ ಅಧಿಕಾರಿಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಮತಗಟ್ಟೆ ಏಜೆಂಟ್ ಕೂಡ ಸಹಕಾರ ನೀಡಿ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಸಹಕರಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲೆ ಈಗಾಗಲೇ ವಿತರಣೆ ಮಾಡಿ ಹಿಂಪಡೆದ ಗಣತಿ ನಮೂನೆಗಳ ಗಣಕೀಕರಣದಲ್ಲಿ ಶೇ.28.32.ರಷ್ಟು ಪ್ರಗತಿ ಸಾಧಿಸಿದ್ದು, ಒಟ್ಟು 4,36,906 ಮತದಾರರ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸಲಾಗಿದೆ ಎಂದು ತಿಳಿಸಿದರು.

ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್‌ಗಳ ಸಭೆ ನಡೆಸಲು ಸೂಚನೆ ನೀಡಿದರು. ಜಿಲ್ಲೆಯಲ್ಲಿ ಇದುವರೆಗೆ 5013 ಸಂಗ್ರಹಿಸಲಾಗದ ಗಣತಿ ನಮೂನೆಗಳು ಎಂದು ಗುರುತಿಸಲಾಗಿದ್ದು, ಈ ಪೈಕಿ 3240 ಮರಣ ಹೊಂದಿರುವ, 1303 ಶಾಶ್ವತ ವಲಸೆ, 413 ಪುನರಾವರ್ತನೆ, 38 ಗೈರು ಮತದಾರರು ಮತ್ತು 19 ಇತರೆ ಕಾರಣಗಳೆಂದು ನಮೂದಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ ವಿಧಾನಸಭಾ ಕ್ಷೇತ್ರಗಳ ಆಯಾ ಮತಗಟ್ಟೆಗಳ ವ್ಯಾಪ್ತಿಗೆ ಮತಗಟ್ಟೆ ಏಜೆಂಟನ್ನು ನೇಮಿಸುವಂತೆ ಕೋರಿದ್ದು, ಅದರಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ 1965, ಭಾರತೀಯ ಜನತಾ ಪಾರ್ಟಿ 1600, ಜನತಾದಳ (ಎಸ್) ಪಕ್ಷದಿಂದ 1671 ಹಾಗೂ ಬಹುಜನ ಸಮಾಜ ಪಾರ್ಟಿ ಪಕ್ಷದಿಂದ 147 ಮತಗಟ್ಟೆ ಏಜೆಂಟರನ್ನು ರಾಜಕೀಯ ಪಕ್ಷಗಳಿಂದ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 5383 ನೇಮಕ ಮಾಡಲಾಗಿದೆ ಎಂದರು.

ಮತಗಟ್ಟೆ ಅಧಿಕಾರಿಗಳು ಮತಗಟ್ಟೆಯ ವ್ಯಾಪ್ತಿಯಲ್ಲಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಮಾಹಿತಿಯನ್ನು ನೀಡುವ ಸಲುವಾಗಿ ರಾಜಕೀಯ ಪಕ್ಷಗಳಿಂದ ಆಯಾ ಮತಗಟ್ಟೆ ವ್ಯಾಪ್ತಿಗೆ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರುಗಳನ್ನು ಒಳಗೊಂಡಂತೆ ಸಭೆ ನಡೆಸಿ ಸಿದ್ಧಪಡಿಸಿ, ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಈ ಮಾಹಿತಿಯನ್ನು ಈಗಾಗಲೇ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರ ಗಮನಕ್ಕೆ ತರುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ನ್ಯೂನ್ಯತೆಗಳಿಗೆ ಅವಕಶವಿಲ್ಲದಂತೆ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಸಲಾಗುತ್ತದೆ ಎಲ್ಲರ ಸಹಕಾರ ಅಗತ್ಯ ಎಂದರು.

ಕಾಂಗ್ರೆಸ್ ಪಕ್ಷದ ಪ್ರತಿನಿಧಿ ರಘು, ಜೆಡಿಎಸ್‌ನ ಎಸ್.ದ್ಯಾವೇಗೌಡ, ಬಿಜೆಪಿಯ ಅಮಿತ್ ಶೆಟ್ಟಿ, ಅಮ್ಮ ಆದ್ಮಿ ಪಕ್ಷದ ಆಗಿಲೆ ಯೋಗೇಶ್, ಕಮ್ಯೂನಿಸ್ಟ್ ಪಕ್ಷದ ಪ್ರತಿನಿಧಿ ನವೀನ್ ಕುಮಾರ್, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಇತರರಿದ್ದರು.

# ಕಾಫಿ ಬೆಳೆಗೆ ಹಾನಿ: ಕೇಂದ್ರದ ನೆರವು ಕೋರಿದ ಹೆಚ್.ಕೆ.ಕೆ.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅನಾವೃಷ್ಟಿ ಹಾಗೂ ಅತಿವೃಷ್ಟಿಯಿಂದ ಕಾಫಿ ಬೆಳೆ ತೀವ್ರ ಹಾನಿಗೊಳಗಾಗಿದ್ದು, ಕೇಂದ್ರ ಸರ್ಕಾರ ತಕ್ಷಣ ಸಮೀಕ್ಷೆ ನಡೆಸಿ ಬೆಳೆಗಾರರಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ನೀಡಬೇಕೆಂದು ಮಾಜಿ ಸಚಿವ ಹೆಚ್. ಕೆ.ಕುಮಾರಸ್ವಾಮಿ ಮನವಿ ಮಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮಾರ್ಚ್‌ನಿಂದ ಮುಂಗಾರು ವಿಳಂಬವಾದ ಪರಿಣಾಮ ಕಾಫಿ ಹೂ ಬಿಡುವ ಪ್ರಕ್ರಿಯೆ ಹಾನಿಗೊಳಗಾಯಿತು. ಬಳಿಕ ಜುಲೈ ಮೊದಲ ವಾರದಲ್ಲಿ ಸುರಿದ ಅಧಿಕ ಮಳೆಯಿಂದ ಕಾಫಿ ಕಾಯಿ ನೆಲಕ್ಕೆ ಉದುರಿ ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ ಎಂದರು.

ಕೇಂದ್ರ ಸರ್ಕಾರ ಕಾಫಿ ತೋಟಗಳ ಸಮಗ್ರ ಸಮೀಕ್ಷೆ ನಡೆಸಿ, ವೈಜ್ಞಾನಿಕ ಮಾನದಂಡಗಳ ಆಧಾರದ ಮೇಲೆ ಪರಿಹಾರ ನೀಡಬೇಕು. ಈ ವಿಷಯವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೂ ತರಲಾಗುವುದು ಎಂದು ತಿಳಿಸಿದರು.

ಕಳೆದ ಒಂದು ವಾರದ ಭಾರೀ ಮಳೆಯಿಂದ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ನೂರಾರು ವಿದ್ಯುತ್ ಕಂಬಗಳು ಧರೆಗುರುಳಿದ್ದು, ಇನ್ನೂ ವಿದ್ಯುತ್ ಸಂಪರ್ಕ ಪುನಃ ಸ್ಥಾಪನೆಯಾಗಿಲ್ಲ. ಸಿಬ್ಬಂದಿ ಕೊರತೆಯ ನೆಪ ಹೇಳುವ ಬದಲು, ಜಿಲ್ಲೆಯ ಮಳೆ ಬಾರದ ಪ್ರದೇಶಗಳಿಂದ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನಿಯೋಜಿಸಿ ವಿದ್ಯುತ್ ದುರಸ್ತಿ ಕಾರ್ಯವನ್ನು ವೇಗಗೊಳಿಸಬೇಕು. 2019ರಲ್ಲಿ 400ಕ್ಕೂ ಅಧಿಕ ವಿದ್ಯುತ್ ಕಂಬಗಳು ಹಾನಿಗೀಡಾಗಿದ್ದರೂ ಕೇವಲ 15 ದಿನದಲ್ಲಿ ದುರಸ್ತಿ ಕಾರ್ಯ ಆಗಿತ್ತು. ಈಗ ಕೇವಲ 100 ವಿದ್ಯುತ್ ಕಂಬಗಳ ರಿಪೇರಿ ಕಾರ್ಯ ಸಾಧ್ಯವಾಗುತ್ತಿಲ್ಲ. ತಾಲ್ಲೂಕು ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿದರು.

# ಬಿಳಿಸುಳಿ ರೋಗ ಬಾಧೆ: ಕೃಷಿ ಅಧಿಕಾರಿಗಳಿಂದ ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬೆಳೆದಿರುವ ಮುಸುಕಿನ ಜೋಳದ ಬೆಳೆಗೆ ಬಿಳಿ ಸುಳಿ ಕೀಟದ ಹಾವಳಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಜಮೀನುಗಳಲ್ಲಿ ಪರೀಶಿಲನೆ ನಡೆಸಿದರು.

ಕೀಟದ ಹಾವಳಿ ಪ್ರಮಾಣ, ಹಾನಿ ಹಾಗೂ ನಿಯಂತ್ರಣ ಕ್ರಮಗಳ ಕುರಿತು ರೈತರಿಗೆ ಮಾಹಿತಿ ನೀಡಿದರು. ಬಿಳಿ ಸುಳಿ ಕೀಟದ ಬಾಧೆಯಿಂದ ಜೋಳದ ಗಿಡಗಳು ಬೆಳವಣಿಗೆ ಕುಂಠಿತವಾಗುವುದು, ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಬೇರುಗಳಿಗೆ ಹಾನಿಯಾಗುವ ಸಾಧ್ಯತೆ ಇರುವುದರಿಂದ ರೈತರು ನಿರಂತರವಾಗಿ ತಮ್ಮ ಹೊಲಗಳನ್ನು ಪರಿಶೀಲಿಸುವಂತೆ ಸಲಹೆ ನೀಡಿದರು.

ಸಕಲೇಶಪುರ ಉಪ ಕೃಷಿ ನಿರ್ದೇಶಕ ಡಾ.ಪ್ರಭಾಕರ್ ಮಾತನಾಡಿ, ಬೆಳೆಯಲ್ಲಿನ ಕೀಟದ ಹಾವಳಿ ಪ್ರಾರಂಭಿಕ ಹಂತದಲ್ಲೇ ಪತ್ತೆಯಾದರೆ ಪರಿಣಾಮಕಾರಿ ನಿಯಂತ್ರಣ ಸಾಧ್ಯ. ಆದ್ದರಿಂದ ಹೊಲಗಳಲ್ಲಿ ನಿಯಮಿತವಾಗಿ ನಿಗಾ ವಹಿಸಿ, ಸೋಂಕಿತ ಗಿಡಗಳನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು. ರೈತರು ಕೃಷಿ ಇಲಾಖೆ ಶಿಫಾರಸ್ಸಿನಂತೆ ಮಾತ್ರ ಕೀಟನಾಶಕ ಬಳಸಬೇಕು. ಸ್ವಯಂ ನಿರ್ಧಾರದಿಂದ ಔಷಧಿ ಸಿಂಪಡಿಸುವ ಬದಲು ಕೃಷಿ ಅಧಿಕಾರಿಗಳ ಸಲಹೆ ಪಡೆದು ವೈಜ್ಞಾನಿಕ ಕ್ರಮ ಅನುಸರಿಸಬೇಕು. ಜಮೀನಿನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಕಳೆ ನಿಯಂತ್ರಣ, ಸಮತೋಲಿತ ಪೋಷಕಾಂಶ ನಿರ್ವಹಣೆಯೂ ಬೆಳೆ ರಕ್ಷಣೆಗೆ ಸಹಕಾರಿಯಾಗಲಿದೆ. ಬೆಳೆ ಹಾನಿಯಾಗಿರುವ ಬಗ್ಗೆ ಮಾಹಿತಿ ಪಡೆದ ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರ ಸಮಸ್ಯೆಗಳ ಬಗ್ಗೆ ಅಗತ್ಯ ತಾಂತ್ರಿಕ ಮಾರ್ಗದರ್ಶನ ನೀಡುವುದಲ್ಲದೆ ಮುಂದಿನ ದಿನಗಳಲ್ಲಿ ಬೆಳೆಗಳ ಮೇಲೆ ನಿಗಾ ವಹಿಸಿ ರೈತರಿಗೆ ಅಗತ್ಯ ನೆರವು ನೀಡಲಿದ್ದಾರೆ ಎಂದರು.



ಬೇಲೂರು ಸಹಾಯಕ ಕೃಷಿ ನಿರ್ದೇಶಕ ಕಾಂತರಾಜ್ ಮಾತನಾಡಿ, ಸಾಮಾನ್ಯವಾಗಿ ಈ ರೋಗವು ಕಬ್ಬಿಟ ಟಕ್ಷ್ಯಟಿಟಠಟಟ್ಟಚ ಎಂಬ ಶಿಲಿಂಧ್ರದಿಂದ ಬರುತ್ತದೆ. ರೋಗ ತಗುಲಿದ ಬೆಳೆಯಲ್ಲಿ ಬೂದು ಬಣ್ಣದ ಶಿಲೀಂಧ್ರವು ಎಲೆಗಳ ತಳ ಮತ್ತು ಮೇಲ್ಭಾಗದಲ್ಲಿ ಕಂಡುಬರುತ್ತದೆ. ಎಲೆಗಳ ಮೇಲೆ ಬಿಳಿ ಮತ್ತು ಹಳದಿ ಉದ್ದನೆ ಪಟ್ಟಿಗಳು ಕಾಣಿಸಿಕೊಂಡು ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಬಿಳಿಯಾಗಿ ಗಿಡಗಳ ಬೆಳವಣಿಗೆ ಕುಂಠಿತವಾಗಿ ಎಲೆಗಳು ಒಣಗಿ ಉದುರುತ್ತವೆ. ವಾತಾವರಣದಲ್ಲಿ ಹೆಚ್ಚು ತೇವಾಂಶ, ತುಂತುರು ಮಳೆ, ಮೋಡ ಕವಿದ ವಾತಾವರಣ, ಮಂಜು ಹನಿಯಿಂದ ಎಲೆಗಳು ದೀರ್ಘ ಸಮಯ ಒದ್ದೆಯಾಗಿರುವುದು, ಮಿತವಾದ ತಾಪಮಾನ ಮತ್ತು ಹೆಚ್ಚು ಆರ್ದ್ರತೆ, ಹಿಂದಿನ ಬೆಳೆಗಳಲ್ಲಿ ಉಳಿದುಕೊಂಡಿದ್ದ ಶಿಲೀಂಧ್ರವು ಹರಡುವ ಸಾಧ್ಯತೆ ಇರುತ್ತದೆ. ರೋಗ ತಗುಲಿದ ಗಿಡಗಳನ್ನು ಕಿತ್ತು ನಾಶಪಡಿಸಿ ಸಮತೋಲನ ಗೊಬ್ಬರ ಬಳಸಬೇಕು. ಅತಿಯಾದ ಸಾರಜನಕದ ಗೊಬ್ಬರ ನೀಡಬಾರದು. ರೋಗದ ಹತೋಟಿಗೆ 2.0 ಗ್ರಾಂ ಮೆಟಲಾಕ್ಸೆಲ್ ಹಾಗು ಮ್ಯಾಂಕೋಜೆಬ್ ಅಥವಾ 2.0 ಮಿ.ಲೀ. ಮೆಟಲಾಕ್ಸೆಲ್ ಮತ್ತು ಕ್ಲೋರೋಥಲನಿಲ್‌ನ್ನು ಪ್ರತಿ ಲೀ. ನೀರಿಗೆ ಬೆರಸಿ ಸಿಂಪಡಿಸಬೇಕು ಎಂದರು.

ಹಳೇಬೀಡು ಕೃಷಿ ಅಧಿಕಾರಿ ಹೇಮಂತ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಕೃಷಿ ಇಲಾಖೆಯ ಲತಾ ಮತ್ತಿತರರಿದ್ದರು.

# ಕಾಮತಿಯಲ್ಲಿ ಒತ್ತುವರಿ ಜಾಗ ತೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲ್ಲೂಕಿನ ಪಾಳ್ಯ ಹೋಬಳಿ ಕಾಮತಿ ಗ್ರಾಮದ ಸರ್ವೆ ನಂ. 73ರಲ್ಲಿ ಒತ್ತುವರಿ ಮಾಡಿಕೊಂಡಿದ್ದ ಸರ್ಕಾರಿ ಜಾಗ ಮತ್ತು ರಸ್ತೆಯನ್ನು ತಹಶೀಲ್ದಾರ್-ಕಂದಾಯ ಇಲಾಖೆ ಅಧಿಕಾರಿಗಳು ಬಿಗಿ ಪೊಲೀಸ್ ಭದ್ರತೆಯಲ್ಲಿ ತೆರವುಗೊಳಿಸಿದರು.

ವ್ಯಾಪ್ತಿಗೆ ಸೇರುವ ಜಮೀನನ್ನು ಸರ್ಕಾರವು ಇತ್ತೀಚೆಗಷ್ಟೇ ಕಂದಾಯ ಗ್ರಾಮವಾಗಿ ಅಧಿಕೃತವಾಗಿ ಘೋಷಿಸಿತ್ತು. ಸರ್ಕಾರದ ಆದೇಶದ ಹೊರತಾಗಿಯೂ ಪ್ರಭಾವಿಗಳು ಉದ್ದೇಶ ಪೂರ್ವಕವಾಗಿ ಬೇಲಿ ನಿರ್ಮಿಸಿ ಜಾಗ ಒತ್ತುವರಿಗೆ ಮುಂದಾಗಿದ್ದರು.

ಗ್ರಾಮಸ್ಥರ ದೂರು ಆಧರಿಸಿ ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಮಲ್ಲಿಕಾರ್ಜುನ ಅವರು, ದಾಖಲಾತಿಗಳ ಪರಿಶೀಲಿಸಿ ಪೊಲೀಸ್ ಹಾಗೂ ಕಂದಾಯ ಸಿಬ್ಬಂದಿ ಸಹಕಾರದೊಂದಿಗೆ ಜಾಗವನ್ನು ತೆರವುಗಳಿಸಿದರು.

ಸರ್ಕಾರಿ ಆಸ್ತಿಯನ್ನು ಕಬಳಿಸಲು ಯತ್ನಿಸುವವರ ವಿರುದ್ಧ ಕಂದಾಯ ಇಲಾಖೆ ಹಾಗೂ ತಹಶೀಲ್ದಾರ್ ಅವರು ತೆಗೆದುಕೊಂಡಿರುವ ದಿಟ್ಟ ಕ್ರಮಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಬ್ ಇನ್ಸಪೆಕ್ಟರ್ ಪ್ರವೀಣ್‌ಕುಮಾರ್, ಕಂದಾಯ ಸಿಬ್ಬಂದಿ ಅನಿಲ್ ನಾಯ್ಕ್, ಗ್ರಾಮಸ್ಥರಾದ ಸಗಣಯ್ಯ, ಮಂಜುನಾಥ್, ರಾಜಯ್ಯ, ಯುವರಾಜ್, ಚಂದ್ರೇಗೌಡ, ಭಾಗ್ಯಮ್ಮ, ಮಲ್ಲಿಗೆಯಮ್ಮ ಇತರರಿದ್ದರು.

## ಮನೆಗೊಂದು ಗ್ರಂಥಾಲಯದಿಂದ ಸಂಸ್ಕೃತಿ ಉಳಿವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮದಡಿ ಪಟ್ಟಣದ ಸಾಹಿತಿ ಹೊನ್ನಶೆಟ್ಟಹಳ್ಳಿ ಗಿರಿರಾಜ್ ಅವರ ನಿವಾಸದಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ನಡೆಯಿತು.

ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಅವರು ಮಾತನಾಡಿ, ಗ್ರಂಥಾಲಯದ ಮಹತ್ವ, ಪುಸ್ತಕ ಓದುಗರ ಬಳಗ ಹೆಚ್ಚಿಸುವ ಬಗ್ಗೆ ತಿಳಿಸಿ, ಜ್ಞಾನದ ಪ್ರತಿರೂಪ ಪುಸ್ತಕಗಳಾಗಿದೆ. ಮನೆಗೊಂದು ಗ್ರಂಥಾಲಯವಾದರೆ ಸಂಸ್ಕೃತಿಯನ್ನು ಉಳಿಸಬಹುದು. ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಮಾತಿನಂತೆ ಸಂಪಾದಿಸುವ ಎರಡು ರೂಪಾಯಿ ಹಣದಲ್ಲಿ ಒಂದು ರೂ. ಆಹಾರಕ್ಕೆ ಮತ್ತೊಂದು ರೂಪಾಯಿ ಜ್ಞಾನದ ಬೆಳಕಿಗೆ ಕಾರಣವಾಗುವ ಪುಸ್ತಕ ಖರೀದಿಗೆ ಮೀಸಲಾಗಲಿ ಎಂಬ ಮಾತುಗಳನ್ನು ಸ್ಮರಿಸಿದರು. ಮನೆಯಲ್ಲಿ ದೇವರ ಮನೆ ಇರುವಂತೆ ಮನೆಗೊಂದು ಗ್ರಂಥಾಲಯ ಜ್ಞಾನದ ಬೆಳಕಿಗೆ ಬೇಕಾಗಿದೆ ಎಂದರು.

## ಇತಿಹಾಸದಲ್ಲಿ ಈ ದಿನ

### ಜುಲೈ-12

1917: ನೆದರ್ಲ್ಯಾಂಡ್ಸ್‌ನ ಪ್ರಸಿದ್ಧ ಕಲಾವಿದ ಪೀಟ್ ಮೊಂಡ್ರಿಯನ್ ಅವರ ಕಲಾಕೃತಿಗಳ ಮೊದಲ ಪ್ರಮುಖ ಪ್ರದರ್ಶನ ನಡೆಯಿತು.
1937: ಬ್ರಿಟಿಷ್ ರಾಜ ಜಾರ್ಜ್ ಆರನೇ ಅವರು ಉತ್ತರ ಐರ್ಲೆಂಡ್‌ಗೆ ಅಧಿಕೃತ ಭೇಟಿ ನೀಡಿದರು.
1962: ಇಂಗ್ಲೆಂಡ್‌ನ ರಾಕ್ ಸಂಗೀತ ಬಳಗ ದಿ ರೋಲಿಂಗ್ ಸ್ಟೋನ್ಸ್ ತನ್ನ ಮೊದಲ ಸಾರ್ವಜನಿಕ ಸಂಗೀತ ಕಾರ್ಯಕ್ರಮ ನೀಡಿತು.
1993 ಜಪಾನ್‌ನ ಹೊಕ್ಕೈಡೊ ಪ್ರದೇಶದಲ್ಲಿ ಸಂಭವಿಸಿದ ಭೂಕಂಪ ಹಾಗೂ ಸುನಾಮಿಯಿಂದ ನೂರಾರು ಜನರು ಸಾವನ್ನಪ್ಪಿದರು.
1998: ಫ್ರಾನ್ಸ್ ತಂಡ ಮೊದಲ ಬಾರಿಗೆ ಫಿಫಾ ವಿಶ್ವಕಪ್ ಫುಟ್‌ಬಾಲ್ ಪ್ರಶಸ್ತಿಯನ್ನು ಗೆದ್ದಿತು.
2012: ಪಾಕಿಸ್ತಾನದ ಬಾಲಕಿಯರ ಶಿಕ್ಷಣ ಹೋರಾಟಗಾರ್ತಿ ಮಲಾಲಾ ಯೂಸಫ್‌ಜೈ ಮೇಲೆ ತಾಲಿಬಾನ್ ಉಗ್ರರು ಗುಂಡಿನ ದಾಳಿ ನಡೆಸಿದರು.

**ಜನನ**

ಕ್ರಿ.ಪೂ. 100: ಜೂಲಿಯಸ್ ಸೀಸರ್, ರೋಮನ್ ಸೇನಾನಿ ಮತ್ತು ರಾಜಕಾರಣಿ
1817: ಹೆನ್ರಿ ಡೇವಿಡ್ ಥೊರೊ, ಅಮೆರಿಕದ ಲೇಖಕ, ತತ್ವಜ್ಞಾನಿ
1854: ಜಾರ್ಜ್ ವಾಷಿಂಗ್ಟನ್ ಕಾರ್ವರ್, ಕೃಷಿ ವಿಜ್ಞಾನಿ
1904: ಪಾಬ್ಲೊ ನೆರುಡಾ, ಚಿಲಿಯ ಕವಿ, ನೋಬೆಲ್ ಪ್ರಶಸ್ತಿ ಪುರಸ್ಕೃತ

# ಮೋಣು – 3

**ಗ್ರಾಮಾಯಣ-19**

**ಧನಂಜಯ ಜೀವಾಳ ಬಿ.ಕೆ.**

ಅದೊಂದು ದಿನ ಮಂಜಯ್ಯನ ಪಟಾಲಂ ತೋಟಗಾರಿಕೆ ಇಲಾಖೆಯ ಕಾಳುಮೆಣಸಿನ ಬುಟ್ಟಿ ವಿತರಣೆಯಲ್ಲಿ ತಮ್ಮೆಲ್ಲರ ಹೆಸರನ್ನು ನೋಂದಾಯಿಸಿಕೊಂಡು, ಎಲ್ಲರೂ ಸೇರಿ ಗುಂಪಾಗಿ ಬಂದಿದ್ದರು. ಪ್ರತಿ ರೈತರಿಗೂ ತಲಾ ನೂರೈವತ್ತು ಗಿಡಗಳನ್ನು ವಿತರಿಸಲು ಯೋಜಿಸಲಾಗಿತ್ತು. ಗಿಡಗಳನ್ನು ಆಗ ತಾನೆ ಗುಲ್ಲನ್ಪೇಟೆ ಬಳಿಯ ಬಾಸನಕಾನಿನಿಂದ ತರಿಸಿ ಇಳಿಸಿ ಜೋಡಿಸಿಡುತ್ತಿದ್ದರು. ಮುಕ್ಕಾಲು ಇಳಿಸಿಡುತ್ತಿದ್ದಂತೆ ಮಂಜಯ್ಯ ಅಲ್ಲಿಯ ಸೂಪರ್ ವೈಜರ್ ಜೊತೆ ಮಾತುಕತೆಗಿಳಿದ. ತನ್ನ ಬಳಿ ನಲವತ್ತು ರೈತರ ಪಟ್ಟಿ ಇದೆ. ಆರು ಸಾವಿರ ಗಿಡಗಳನ್ನು ಕೆಳಗಿಳಿಸದೇ ಇದೇ ಲಾರಿಯಲ್ಲಿ ತಮಗೇ ಕಳಿಸಿಕೊಡಬೇಕೆಂದು ತಾಕೀತು ಮಾಡತೊಡಗಿದ. ಆಲ್ದೂರಿನ ಲಾರಿಯವ ತನಗೆ ಕಡೂರಿಗೆ ಕೊಬ್ಬರಿ ಲೋಡಿಗೆ ಹೋಗುವುದಿದೆ ಎಂದು ಬಾಯಾಡುತ್ತಿದ್ದ. ಸೂಪರ್‌ವೈಜರ್ ಡ್ರೈವರ್‌ನ ಮನವೊಲಿಸಲು ಪ್ರಯತ್ನಿಸುತ್ತಿರುವಷ್ಟರಲ್ಲಿ ಅಲ್ಲಿಗೆ ಬಂದ ಗುಣೇಬೈಲಿನ ಕುಮಾರ ಮತ್ತವನ ಸಂಗಡಿಗರು ಯಾರಿಗೂ ಗಿಡ ಕೊಡಕೂಡದು. ಯಾರಾದರೂ ಬುಟ್ಟಿಗೆ ಕೈಹಾಕಿದರೆ ಚಿಂದಿಮಾಡ್ತಾಕ್ತೀವಿಟಿ ಎಂದರು. ಕುಮಾರನ ಗುಂಪಿನಲ್ಲಿದ್ದುದು ಎಂಟು ಜನ. ಈ ಮಂಜಯ್ಯನ ಜೊತೆ ಇದ್ದ ಸುಮಾರು ಇಪ್ಪತ್ತು ಜನ ಕೈಯಲ್ಲಿದ್ದ ಬ್ಯಾಗು-ಛತ್ರಿ ಮುಂತಾದುವನ್ನು ಬದಿಗಿರಿಸಿ ತೋಳೇರಿಸಿ ಗುದ್ದಾಟಕ್ಕೆ ಸಿದ್ಧರಾದರು. ಸರ್ಕಾರ ಕೊಡೋ ಸವಲತ್ತಿಗೆ ಪಂಚಾಯಿತಿ ಮೆಂಬರ್‌ಗಳ ಪತ್ರ ಬೇಕಂತೆ! ಆ ನನ್ನಮಗ ಏಹೆಚ್‌ಓ ಅವನ ಅಪ್ಪನ ಮನೆದನ್ನ ಕೊಡೋ ಹಾಗೆ ಮಾತನಾಡುತ್ತಾನೆ. ಬೆಳಿಗ್ಗೆ ಎದ್ದು ಮುಖಾನೇ ಸರಿಯಾಗಿ ತೊಳೆಯಲ್ಲ ಅಂಥ ನಮ್ಮೂರಿನ ಪಂಚಾಯಿತಿ ಮೆಂಬರ್‌ಗಳ ಪತ್ರಾ ಬೇಕಂತೆ ಪತ್ರ. ಪಂಚಾಯಿತಿಯಲ್ಲಿ ತುಂಬಿಕೊಂಡಿರುವವರೆಲ್ಲಾ ನಮ್ಮ ವೈರಿಗಳೇ. ನಮಗೆಲ್ಲಿ ಪತ್ರ ಕೊಡುತ್ತಾರೆ. ಕೊಟ್ರೂ ಆ ಹಲಾಲುಕೋರರ ಶಿಫಾರಸ್ಸು ನಮಗೆ ದೇವರಾಣೆಗೂ ಬೇಡ. ನಾವೂ ಟ್ಯಾಕ್ಸ್ ಕೊಡ್ತೀವಿ. ಜನರಿಗೆ ಹಂಚೋಕಂತಾನೆ ಈ ವ್ಯವಸ್ಥೆನಾ ಮಾಡಿರೋದು. ಪಂಚಾಯ್ತಿ ಮೆಂಬರು ಯಾರು? ಗಿಡ ಏನು ಅವರ ಅಪ್ಪಂದ? ಕೋಳಿ ಕೇಳಿ ಏನು ಮಸಾಲೆ ಅರೆಯೋದು. ತಿಕಾ ಮುಚ್ಕೊಂಡು ನಮಗೆ ಎಲ್ರಿಗೂ ಕೊಡೋ ಹಾಗೆ ಗಿಡಾ ಕೊಡ್ಬೇಕು. ಯಾವ ಬೋಳಿಮಗನ ಶಿಫಾರಸ್ಸನ್ನೂ ತರೊಲ್ಲಾ ನಾವು. ಇದೊಂತರ ನಾ ಸತ್ತಂಗೆ ಮಾಡ್ತೀನಿ ನೀ ಅತ್ತಂಗೆ ಮಾಡು ಅಂದಂಗೆಟಿ ಎಂದು ಕುಮಾರನ ಗುಂಪಿನವರು ತಲೆಗೊಂದೊಂದು ಮಾತನಾಡತೊಡಗಿದರು.

ಮಂಜಯ್ಯನ ಕಡೆಯೋರು ನಿಂತಲ್ಲೇ ಸ್ತಬ್ಧರಾದರು. ಕುಮಾರನ ಕಡೆಯವರ ಆವೇಶ ಕಂಡು ಇವರೇನಾದರೂ ಅನಾಹುತ ಮಾಡೋಹಾಗೇ ಕಾಣ್ತಾರೆ ಎಂದುಕೊಂಡು ಸೂಪರ್‌ವೈಜರ್ ಕಡೆ ಮುಂದೇನು ಎಂಬಂತೆ ನೋಡತೊಡಗಿದರು. ಲಾರಿ ಡ್ರೈವರ್ ತನ್ನ ಮುಂದಿನ ಬಾಡಿಗೆ ವ್ಯವಸ್ಥೆ ಫೈಲ್‌ಫೈಲ್ ಆಗುತ್ತಿರುವುದನ್ನು ಕಂಡು ಕಂಗಾಲಾಗತೊಡಗಿದ. ತನ್ನ ಪಕ್ಕದಲ್ಲೇ ನಿಂತಿದ್ದ ಕುಮಾರನ ಗುಂಪಿನವನೊಬ್ಬನನ್ನು ಕರೆದು ಅಣ್ಣಾ, ಗಿಡ ಇಳಿಸಿ ಹೋಗ್ತಿನಣ್ಣ; ನನಗೆ ಬೇರೆ ಬಾಡಿಗೆ ಇದೆಟಿ ಅಂದ. ಅಷ್ಟಕ್ಕೆ ಅವನು ಕುಮಾರನನ್ನು ಬದಿಗೆ ಸರಿಸಿ, ಡ್ರೈವರ್‌ನನ್ನು ಎದೆಗೆ ಕೈ ಹಾಕಿ ಲಾರಿ ಬಾನೆಟ್ಟಿಗೆ ಗುದ್ದಿ ನಿಲ್ಲುವಂತೆ ನೂಕಿ ನನ್ಮಗನೆ, ಯಾರಿಗೋ ಬೀಳೋ ಗೂಸಾ ನಿನಗೇ ಬೀಳುತ್ತೇ, ಅಜ್ಜಿಗೆ ಅರಿವೆ ಚಿಂತೆ ಅಂದ್ರೆ, ಮೊಮ್ಮಗಳು ಇನ್ನೇನೋ ಕೇಳಿದ್ಲಂತೆ, ಈ ನನ್‌ಮಕ್ಳು ಅಧ್ಯಕ್ಷ, ಸೆಕ್ರೆಟ್ರಿ ಸೇರ್ಕೊಂಡು ಏನೇನು ಬಾನಗಡಿ ಮಾಡ್ತಿದಾರೆ ಗೊತ್ತಾ? ರಸ್ತೆ ಗುಂಡಿ ಬಿದ್ದಿದೆ ಅಂತ ನಮ್ಮ ಯುವಕ ಸಂಘದಿಂದ ಶ್ರಮದಾನ ಮಾಡಿ ಗುಂಡಿಗೆಲ್ಲ ಗ್ರಾವೆಲ್ ಹಾಕಿ ರಸ್ತೆ ಸರಿ ಮಾಡಿದರೆ ಈ ಹಲ್ಕಾಗಳು ಅದಕ್ಕೆ ಪಂಚಾಯ್ತಿಯಿಂದ ಬಿಲ್ ಮಾಡಿಸಿಕೊಂಡು ತಿಂದಿದ್ದಾರೆ. ನಿಜವಾಗಿಯೂ ಖರ್ಚಾಗಿರೋದು ಒಂದು ಸಾವಿರ ರೂಪಾಯಿಗಿಂತಲೂ ಕಡಿಮೆ. ಈ ಬೋಳಿಮಕ್ಳು ಆ ಗುಂಡಿ ಮುಚ್ಚಿದ ಕೆಲಸಕ್ಕೆ ಎಂಟು ಸಾವಿರ ರೂಪಾಯಿ ಬಿಲ್ ಮಾಡಿಸಿಕೊಂಡಿದ್ದಾರೆ. ಅಂಥಾ ಅಯೋಗ್ಯರ ಹತ್ರ ನಾವು ಶಿಫಾರಸ್ಸು ಪತ್ರ ತರಬೇಕಾ?

ಸಾಹೇಬ್ರು, ಸೈನ್ ಹಾಕಿ ಗಿಡ ಕೊಡಿ ಅಂತ ಅಲಾಟ್ ಮೆಂಟ್ ಲೆಟರ್ ಬರೆದುಕೊಡದಿದ್ರೆ, ನಾನು ನಿಮಗೆ ಗಿಡ ಕೊಡೋಕೆ ಆಗೊಲ್ಲ. ನನ್ನ ಧರ್ಮಸಂಕಟ ಅರ್ಥ ಮಾಡ್ಕೊಳ್ಳಿ. ನೀವು ಎ.ಹೆಚ್.ಓ. ಹತ್ರಾನೆ ಮಾತಾಡ್ಕೊಂಡು ಏನಾದ್ರೂ ತೀರ್ಮಾನ ಮಾಡ್ಕೊಂಡು ಬನ್ನಿ. ಇಲ್ಲಿ ಹೊಡೆದಾಟ ಮಾಡ್ಬೇಡಿಟಿ ಎಂದ ಸೂಪರ್‌ವೈಜರ್. ಕುಮಾರನ ಗುಂಪಿನಲ್ಲಿ ಆಂಗ್ರಿ ಯಂಗ್‌ಮ್ಯಾನ್‌ನ ಪ್ರತಿರೂಪದಂತಿದ್ದ ಕೋಳೂರು ಸಂದೀಪ ಯಾವನ್ರೀ ಸಾಹೇಬ, ಆ ಕಮಿಷನ್ ತಿನ್ನೋ ಹೇತ್ಲಾಂಡಿನಾ? ಅವನೇನಿದ್ರು ನಿನಗೆ ಮಾತ್ರ ಸಾಹೇಬ. ಕಚಡಾ! ಛೇಂಬರಿಗೆ ಹೋದ್ರೆ ಕೂತ್ಕಳಕ್ಕೆ ಸಹ ಹೇಳಲ್ಲ ರ್‍ಯಾಸ್ಕಲ್, ಅವರು ಕೂತಿರೋ ಛೇರ್ ಸಮೇತ ನಮ್ದು ಗೊತ್ತಾಯ್ತಾ. ಅವನನ್ನೇ ಬರಕ್ಕೆ ಹೇಳಿ ಕಳಿಸಿ ಇಲ್ಲಿಗೆ. ಅದೇನ್ ಪೂಕ್ತಾನೋ ಇಲ್ಲೇ ಪೂಕ್ಲಿ. ಹೋದ ವರ್ಷ ನಮ್ಮೂರಲ್ಲಿ ಆ ಮಹೇಶ ಸ್ಕೂಲಿಗೆ ಗಿಫ್ಟ್ ಅಂತ ನಾಲ್ಕು ಸಾವಿರ ಖರ್ಚು ಮಾಡಿ ಧ್ವಜ-ಕಟ್ಟೆ ಕಂಬ ಮಾಡಿಸಿಕೊಟ್ರೆ ಈ ಬಿಕನಾಸಿ ಮೆಂಬರುಗಳು ಸೇರಿ ಅದಕ್ಕೂ ಒಂಬತ್ತು ಸಾವಿರ ಬಿಲ್ ಮಾಡಿಸಿಕೊಂಡು ಹಂಚಿಕೊಂಡಿದ್ದಾರೆ ಗೊತ್ತಾ? ಎಂದ.



ಯಾಕೋ ಇದು ಮುಗಿಯುವ ಹಂಗೆ ಕಾಣಲ್ಲ. ಈ ಡ್ರೈವರ್‌ನ ಪುಸಲಾಯಿಸಿ ಮೆಣಸಿನಬುಟ್ಟಿ ಲೋಡನ್ನು ಇಳಿಸದೇ ಹಾಗೇ ತಮ್ಮ ಜಾಗಕ್ಕೆ ಸಾಗಹಾಕಬೇಕೆಂದುಕೊಂಡಿದ್ದವರು ಇದೇ ರೀತಿ ಸಮಯ ಕಳೆದರೆ ಒಂದಕ್ಕೆ ಎರಡು ಪಟ್ಟು ಕೊಟ್ಟು ಬೇರೆ ಲಾರಿ ತಂದು ಲೋಡ್-ಅನ್‌ಲೋಡಿಂಗ್ ಅಂತ ಮತ್ತೆ ಖರ್ಚು ಮಾಡಬೇಕಾಗುತ್ತೆ ಎಂದು ಯೋಚಿಸಿ ಮಂಜಯ್ಯ ಹೌದೌದು ಸಂದೀಪಣ್ಣ, ಈ ಪಂಚಾಯ್ತಿಗಳು ಎಷ್ಟು ಕುಲಗೆಟ್ಟಿವೆ ಅಂದ್ರೆ ಕೆಲವು ಕಡೆ ಹೆಬ್ಬೆಟ್ಟುಗಳನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಸೆಕ್ರೆಟ್ರಿಗಳೇ ರಾಜ್ಯಬಾರ ಮಾಡ್ತಿದ್ದಾರೆ. ಇನ್ನು ಕೆವೆಡೆ ಅಂತೂ ಬಿಲ್ ಕಲೆಕ್ಟರುಗಳು ಪಂಚಾಯ್ತಿ ಕೆಲಸಗಳನ್ನೇ ತಮ್ಮ ಮನಸೋಇಚ್ಛೆ ಬೇಕಾದವರಿಗೆ ಹಂಚುತಿದ್ದಾರಂತೆ. ಎಲ್ಲಮ್ಮನ ಜಾತ್ರೆ ಮಾಡ್ತಾ ಸರ್ಕಾರದ ದುಡ್ಡನ್ನ ಹಬ್ಬ ಹುಡಿಹಾರಿಸ್ತಾ ಇದ್ದಾರೆ. ಅದ್ಯಾವುದೋ ಪಂಚಾಯ್ತಿಲಿ ಬಿಲ್ ಕಲೆಕ್ಟರ್ರೇ ತಹಸೀಲ್ದಾರ್ರ ಸೈನ್ ಹಾಕಿ ನಿವೇಶನ ಹಂಚ್ತಾ ಇದಾನಂತೆ. ಒಂದು ಸೈಟಿಗೆ ಹತ್ತು ಸಾವಿರ ಕಮಿಷನ್ನಂತೆ. ಸೈಟ್ ಸಿಗದವರು ಯಾರೋ ದೂರು ಕೊಟ್ಟರೆ, ನೆಪ ಮಾತ್ರಕ್ಕೆ ಸಸ್ಪೆಂಡ್ ಮಾಡಿ ಮತ್ತೆ ಅದೇ ವಂಚಕನನ್ನು ಕೆಲಸಕ್ಕೆ ತಗೊಂಡಿದ್ದಾರಂತೆ. ಈಗ ಅವನು ಅಂತಾ ಕೆಲಸ ಮಾಡೋ ಖದೀಮರಿಗೆ ಗುರುವಾಗಿ ಯಾರ್‍ಯಾರಿಗೆ ಯಾವಾಗ ಹೇಗೆ ಎಲ್ಲಿ ಟೋಪಿ ಹಾಕಬಹುದು ಅಂತ ಟ್ಯೂಷನ್ ಕೊಡ್ತಾನಂತೆ. ಎಂತಾ ಕಾಲ ಬಂತು ಛೇ!!!!

ಅಷ್ಟರಲ್ಲಿ ಏ.ಹೆಚ್.ಓ. ತನ್ನ ಕಾಲು ಬಾಲಗಳೊಂದಿಗೆ ಬಂದಿಳಿದರು. ಮಂಜಯ್ಯ ದೂರದಿಂದಲೇ ಸಾಹೇಬರಿಗೆ ಅರ್ಥಗರ್ಭಿತವಾಗಿ ಸಲಾಮು ಹೊಡೆದ. ಕುಮಾರ ಮತ್ತವನ ಗೆಳೆಯರು ಏ.ಹೆಚ್.ಓ. ಬಂದಿದ್ದು ಗೊತ್ತಾದರೂ ತಿರುಗಿಯೂ ನೋಡಲಿಲ್ಲ. ಎ.ಹೆಚ್.ಓ. ಬಳಿಗೆ ಸೂಪರ್ ವೈಸರ್ ಓಡಿಹೋದ. ಯಾವುದೋ ಒಂದಷ್ಟು ಟ್ರಾನ್ಸಿಸ್ಟ್ ಡ್ಯಾಮೇಜ್ ಅಂತಾ ತೋರಿಸಿ ಕೊಟ್ಟು ಕಳಿಸ್ರೀ, ಸುಮ್ನೆ ಯಾಕೆ ತರಲೆ ಮಾಡ್ಕೊಳ್ತೀರಿ, ಇವರ ಸಹವಾಸ ನಿಮಗೆ ಗೊತ್ತಿಲ್ವಾ? ಆ ಸ್ಪೈಸಸ್ ಬೋರ್ಡ್ ವೇಲಾಯುಧನ್‌ನ ಎತ್ತಿ ಕುಕ್ಕರಿಸಿದ್ದು, ಆತ ಸೊಂಟ ಮುರಕೊಂಡು ಈ ಊರಿಂದಲೇ ವರ್ಗ ಮಾಡಿಸಿಕೊಂಡು ಹೋದದ್ದು ಮರೆತ್ರಾ? ಎಂದವರೇ ಅದೇ ಲಡಾಸು ಜೀಪಿನಲ್ಲಿ ಗೊಸಗೊಸ ಸದ್ದುಮಾಡುತ್ತಾ ಹೊರಟುಹೋದರು.

ಸರೀ ಕುಮಾರಣ್ಣ ನಿಮಗೆ ಬೇಕಾದ ಗಿಡಗಳನ್ನ ನೀವೇ ಸೆಲೆಕ್ಟ್ ಮಾಡಿಕೊಂಡು ತಗೊಂಡು ಹೋಗಿ ಬನ್ನಿ ಬನ್ನಿಟಿ ಎಂದ ಸೂಪರ್‌ವೈಸರ್. ಅದೆಲ್ಲಾ ಆಗೊಲ್ಲ ನಿಮ್ಮ ಪ್ರೊಸಿಜರ್ ಪ್ರಕಾರನೇ ಆಫೀಸ್ ರೆಕಾಡ್‌ನಲ್ಲೇ ಇದೆಲ್ಲಾ ದಾಖಲಾಗಬೇಕು. ನಾವ್ಯಾರು ಶಿಫಾರಸ್ಸು ಪತ್ರ ತರಲ್ಲ ನೆನಪಿರಲಿ. ಮಂಜಣ್ಣಾ, ನೀವು ಗಿಡಾ ತಗೊಂಡು ಹೋಗಿ. ರೀ ಸೂಪರ್‌ವೈಸರ್ರೇ ನಾಳೆ ಬರ್ತೀವಿ ನಿಮ್ಮ ಸಾಹೇಬರಿಗೆ ಹೇಳಿ ಯಾರ್‍ದೂ ಪತ್ರ ತರಲ್ಲ. ನಿಮ್ಮ ಸಾಹೇಬನೇ ಅಲಾಟ್‌ಮೆಂಟ್ ಲೆಟರ್ ಕೊಡಬೇಕು ಗೊತ್ತಾಯ್ತಾ. ಬನ್ರೋ ಕೊನೇ ಬಸ್ಸು ಮಿಸ್ಸಾದ್ರೆ ಕಷ್ಟಟಿ ಎಂದವನೇ ದುಸದುಸನೇ ಉಸಿರು ಬಿಡುತ್ತಾ ಅಲ್ಲಿಂದ ನಿರ್ಗಮಿಸಿದ.

ಲಾರಿ ಡ್ರೈವರ್‌ನನ್ನು ಪುಸಲಾಯಿಸಿ ಇನ್ನೂರು ರೂಪಾಯಿಗಳನ್ನು ಕೊಟ್ಟು ಎಲ್ಲಾ ಬುಟ್ಟಿಗಳನ್ನು ಚೆಟ್ಟಿಯಾರರ ಕೋಣನಕಾನು ಎಸ್ಟೇಟಿಗೆ ಡಂಪ್ ಮಾಡಿಸಿ, ಚೆಟ್ಟಿಯಾರನಿಂದ ಆರು ಸಾವಿರ ರೂಪಾಯಿ ದುಡ್ಡು ಇಸ್ಕೊಂಡು, ಜೊತೆಯವರಿಗೆ ರಾಜಾ ವಿಸ್ಕಿ ಕುಡಿಸಿ, ಬಾಯಮ್ಮನ ಹೋಟೇಲಿನಲ್ಲಿ ಸಮ್ಮಾ ಪೋರ್ಕ್ ಊಟ ಹಾಕಿಸಿ, ಕೈಗೆ ಐವತ್ತು-ಐವತ್ತು ಕೊಟ್ಟು, ತಾನು ಮೂರು ಸಾವಿರ ಜೇಬಿಗಿಳಿಸಿ ಕೆಮ್ಮಿ ಕ್ಯಾಕರಿಸಿ ಊರಿಗೆ ಹೋಗಲು ನಾಲ್ಕು ಆಟೋಗಳನ್ನು ಎಂಗೇಜ್ ಮಾಡಿದ. ಈ ರೀತಿಯ ಇತಿಹಾಸವಿರುವ ಮಂಜಯ್ಯ ಮೈಯಲ್ಲಿ ಬೆವರಿಳಿಯದಂತಹ ಮತ್ತನೆಯ ಕೆಲಸಗಳನ್ನು ಆಯ್ದು ಮುಂದಿನ ತಾಲ್ಲೂಕು ಪಂಚಾಯಿತಿ ಎಲೆಕ್ಷನ್ನಿಗೆ ನಿಲ್ಲುವ ಎಸ್ಟಿಮೇಟ್ ನಡೆಸಿದ್ದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248